# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 737 (794) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ. | ಚಿತ್ರದುರ್ಗ ಜಿಲ್ಲೆ, ಹಿರಿಯೂರಿನಲ್ಲಿ ಹೊಸದಾಗಿ ಎಷ್ಟು ಕೈಗಾರಿಕಾ ಪಾರ್ಕ್ ಗಳನ್ನು ಪ್ರಾರಂಭಿಸಲಾಗಿದೆ; | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನಲ್ಲಿ ಮೇಟಿಕುರ್ಕಿ ಕೈಗಾರಿಕಾ ಪ್ರದೇಶವನ್ನು 1156.31 ಎಕರೆ ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. |
| ಆ. | ಈ ಕೈಗಾರಿಕಾ ಪಾರ್ಕ್‌ಗಳಿಗೆ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ ಎಷ್ಟು; ರೈತರ ಸಂಖ್ಯೆ ಎಷ್ಟು; | ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನಲ್ಲಿ ಮೇಟಿಕುರ್ಕಿ ಮತ್ತು ಕರಿಯೋಬನಹಳ್ಳಿ ಗ್ರಾಮಗಳಲ್ಲಿ ಒಟ್ಟು 1156-12½ ಎಕರೆ ಜಮೀನನ್ನು ಕೆಐಎಡಿ ಕಾಯ್ದೆ ಕಲಂ 28(4) ರಡಿ ಅಂತಿಮ ಅಧಿಸೂಚನೆ ದಿನಾಂಕ 12.02.2022 ರಂತೆ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಇದರಲ್ಲಿ ಒಟ್ಟು 225 ರೈತರಿದ್ದಾರೆ. |
| ಇ. | ಸ್ವಾಧೀನಪಡಿಸಿಕೊಂಡಿರುವ ರೈತರ ಜಮೀನಿಗೆ ಪರಿಹಾರ ನೀಡಲು ಸರ್ಕಾರವು ನಿಗಧಿಪಡಿಸಿರುವ ಹಣ ಎಷ್ಟು; ಎಷ್ಟು ರೈತರಿಗೆ ಪರಿಹಾರ ನೀಡಲಾಗಿದೆ; ಉಳಿಕೆ ರೈತರು ಎಷ್ಟು; ನ್ಯಾಯಾಲಯದಲ್ಲಿರುವ ಪ್ರಕರಣ ಸಂಖ್ಯೆ ಎಷ್ಟು; (ವಿವರ ನೀಡುವುದು) | ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನಲ್ಲಿ ಮೇಟಿಕುರ್ಕಿ ಮತ್ತು ಕರಿಯೋಬನಹಳ್ಳಿ ಗ್ರಾಮಗಳಲ್ಲಿ ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಎಕರೆ ಒಂದಕ್ಕೆ ರೂ.35.00 ಲಕ್ಷದಂತೆ ದರ ನಿಗದಿಯಾಗಿದ್ದು, ಈವರೆವಿಗೂ 200 ಜನ ರೈತರ 980.00 ಎಕರೆ ಜಮೀನಿಗೆ ಪರಿಹಾರ ಪಾವತಿಸಲಾಗಿರುತ್ತದೆ.<br><br>ಉಳಿಕೆ 25 ಜನ ರೈತರಿಗೆ ಪರಿಹಾರ ಪಾವತಿ ಕಾರ್ಯ ಪ್ರಗತಿಯಲ್ಲಿದೆ. |

**ನ್ಯಾಯಾಲಯದ ಪ್ರಕರಣಗಳು ವಿವರಗಳು**

| ಕ್ರ. ಸಂ. | ನ್ಯಾಯಾಲಯದ ಪ್ರಕರಣ ಸಂಖ್ಯೆ | ಸರ್ವೆ ನಂಬರ್ ಮತ್ತು ವಿಸ್ತೀರ್ಣ |
|---|---|---|
| | **ಮೇಟಿಕುರ್ಕಿ ಗ್ರಾಮ** | |
| 1. | WPNo.28905/2023 | 80/4, 80/5 ರಲ್ಲಿ ಒಟ್ಟು 26-28 ಎ/ಗು |
| 2. | O.No. 45/2021 | 98/1 ರಲ್ಲಿ 7-01 ಎ/ಗು |
| 3. | O.S NO.128/2022 | 109, 259 ರಲ್ಲಿ 38-36 ಎ/ಗು |
| 4. | O.S NO.130/2022 | 131/2 ರಲ್ಲಿ 8-07 ಎ/ಗು |
| 5. | O.S NO.110/2022 | 131/4 ರಲ್ಲಿ 4-09 ಎ/ಗು |
| 6. | O.S NO.16/2016 | 131/5 ರಲ್ಲಿ 4-00 ಎ/ಗು, 132/2 ರಲ್ಲಿ 12-36 ಎ/ಗು |

| | | |
|---|---|---|
| | | 7. O.S NO.168/2023 — 134/1 ರಲ್ಲಿ 10-17 ಎ/ಗು<br>**ಕರಿಯೋಬನಹಳ್ಳಿ**<br>8. O.S NO.48/2022 — 54/1 ರಲ್ಲಿ 20-22 ಎ/ಗು<br>9. O.S NO.183/2023 — 65/1 ರಲ್ಲಿ 11-10 ಎಕರೆ<br>10. O.S NO.04/2022 — 71 ರಲ್ಲಿ 16-23 ಎ/ಗು |
| ಈ. | ಕೈಗಾರಿಕಾ ಪಾರ್ಕ್‌ಗಳಿಗೆ ನೀಡಿರುವ ಮೂಲಭೂತ ಸೌಕರ್ಯಗಳೇನು; | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನ ಮೇಟಿಕುರ್ಕಿ ಕೈಗಾರಿಕಾ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ನೀರು ಸರಬರಾಜು ಮತ್ತು ವಿದ್ಯುತ್ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ಗುತ್ತಿಗೆದಾರರನ್ನು ಟೆಂಡರ್ ಮುಖಾಂತರ ಆಯ್ಕೆ ಮಾಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಗುತ್ತಿಗೆ ಕರಾರಿನ ಕಾಲಾವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ. |
| ಉ. | ಪಾರ್ಕ್‌ಗೆ Allot ಆಗಿರುವ ನೀರಿನ ವಿದ್ಯುತ್ ಪ್ರಮಾಣವೆಷ್ಟು; ಯಾವ ಮೂಲದಿಂದ ನೀರಿನ ವ್ಯವಸ್ಥೆ ಮಾಡಲಾಗುವುದು; | ಮೇಟಿಕುರ್ಕಿ ಕೈಗಾರಿಕಾ ಪ್ರದೇಶಕ್ಕೆ ವಾಣಿ ವಿಲಾಸ ಸಾಗರದಿಂದ 5 ಎಂ.ಎಲ್.ಡಿ. ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಕೈಗಾರಿಕಾ ಪ್ರದೇಶಕ್ಕೆ 15 MVA ಸಾಮರ್ಥ್ಯದ ವಿದ್ಯುತ್ ಕಲ್ಪಿಸಲು ಹೊಸದಾಗಿ 66/11 KV ವಿದ್ಯತ್ ಉಪ ಕೇಂದ್ರ ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ ಹಾಗೂ ಪರ್ಯಾಯವಾಗಿ ಮಲ್ಲಪ್ಪನಹಳ್ಳಿ ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಅನ್ನು ಪೂರೈಸಲಾಗುತ್ತದೆ. |
| ಊ. | ಈ ಹಿಂದೆ ಹಿರಿಯೂರು ತಾಲ್ಲೂಕಿನ ಸೀಗೆಹಟ್ಟಿ, ಯಲ್ಲದಕೆರೆ ಗ್ರಾಮಗಳ ಸರ್ವೇ ನಂ. 228, 229, 230, 231, 232, 236 ರವರೆಗೆ ಸರ್ಕಾರಿ ಜಮೀನು ನೀಡಿದ್ದು, ಇದುವರೆವಿಗೂ 440 ಎಕರೆ ಜಮೀನುಗಳಲ್ಲಿ ಯಾವುದೇ ಪ್ರಗತಿ ಇರುವುದಿಲ್ಲ, ಈ ಜಮೀನನ್ನು ವಾಪಾಸ್ಸು ನೀಡದಿರಲು ಕಾರಣವೇನು? (ವಿವರದೊಂದಿಗೆ ಮಾಹಿತಿ ನೀಡುವುದು) | ಮಂಡಳಿಯು ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಜಿ.ಜಿ ಹಳ್ಳಿ ಹೋಬಳಿ, ಯಲ್ಲದಕೆರೆ ಗ್ರಾಮದ ವಿವಿಧ ಸರ್ವೆ ನಂಬರ್ ಗಳಲ್ಲಿ ಒಟ್ಟಾರೆ 531-21 ಎಕರೆ ಸರ್ಕಾರಿ ಜಮೀನನ್ನು ಕೈಗಾರಿಕಾ ಪ್ರದೇಶದ ಲ್ಯಾಂಡ್ ಬ್ಯಾಂಕ್ ಯೋಜನೆಗೆ ಭೂಸ್ವಾಧೀನಪಡಿಸಲು ದಿನಾಂಕ:05.06.2009 ರಂದು ಕೆಐಎಡಿ ಕಾಯ್ದೆ ಕಲಂ 3(1), 1(3) ರಡಿ ಅಧಿಸೂಚನೆ ಹೊರಡಿಸಲಾಗಿತ್ತು.<br><br>ದಿನಾಂಕ:19.06.2010 ರ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಮೆ:Trans India Shipping Services Pvt Ltd., ರವರ 0.5 MTPA Integrated Steel Plant and 72 MW Captive Power Plant ಘಟಕ ಸ್ಥಾಪಿಸುವ ಯೋಜನೆಗೆ ಅನುಮೋದನೆ ನೀಡಿ, ಮಂಡಳಿ ವತಿಯಿಂದ ಯಲ್ಲದಕೆರೆ ಗ್ರಾಮದ ವಿವಿಧ ಸರ್ವೆ ನಂಬರ್ ಗಳಲ್ಲಿ ಒಟ್ಟು 440 ಎಕರೆ ಜಮೀನನ್ನು ಹಂಚಿಕೆ ಮಾಡಲು ಶಿಫಾರಸ್ಸು ಮಾಡಿರುತ್ತದೆ.<br><br>ಕಂದಾಯ ಇಲಾಖೆಯ ಸರ್ಕಾರಿ ಆದೇಶ ದಿನಾಂಕ 30.04.2012 ರಲ್ಲಿ, ಯಲ್ಲದಕೆರೆ ಗ್ರಾಮದ ಸರ್ವೆ ನಂ.228/ಪಿ, 229/ಪಿ, 230/ಪಿ, 231/ಪಿ, 232/ಪಿ & 236/ಪಿ ಗಳಲ್ಲಿ ಒಟ್ಟಾರೆ 440.05 ಎಕರೆ ಜಮೀನನ್ನು ಮೆ:Trans India Shipping Services Pvt., Ltd., ರವರಿಗೆ ಹಂಚಿಕೆ |

ಮಾಡುವ ಸಲುವಾಗಿ ಮಂಡಳಿಗೆ ವರ್ಗಾವಣೆ ಮಾಡಲಾಗಿದೆ.

ದಿನಾಂಕ:02.07.2012 ರಂದು ನಡೆದ ಕೆಐಎಡಿಬಿ ಮಂಡಳಿ ಸಭೆಯ ನಿರ್ಣಯದನ್ವಯ, ಮೆ: Trans India Shipping Services Pvt., Ltd., ರವರಿಂದ ಸದರಿ ಜಮೀನಿನ ಮೊತ್ತ ಪ್ರತಿ ಎಕರೆಗೆ ರೂ.1.25 ಲಕ್ಷದಂತೆ & ಶೇ.10 ರಷ್ಟು ಮಂಡಳಿ ಸೇವಾ ಶುಲ್ಕ ಸೇರಿ ಒಟ್ಟಾರೆ ರೂ.6,05,17,183/- ಗಳನ್ನು ಮಂಡಳಿಗೆ ಪಾವತಿಸಿಕೊಳ್ಳಲಾಗಿದೆ.

ಮುಂದುವರೆದು, 440-05 ಎಕರೆ ಸರ್ಕಾರಿ ಜಮೀನಿನ ಪೈಕಿ, ಸರ್ವೆ ನಂ.230/ಪಿ ರಲ್ಲಿನ 98-32 ಎಕರೆ ಜಮೀನನ್ನು ಭೂಸ್ವಾಧೀನಪಡಿಸಲು ಹಿಂದೆ ಅಧಿಸೂಚನೆ ಹೊರಡಿಸಿರುವುದಿಲ್ಲ. ಆದುದರಿಂದ ದಿನಾಂಕ:02.07.2012 ರಂದು ನಡೆದ ಕೆಐಎಡಿ ಮಂಡಳಿ ಸಭೆಯ ನಿರ್ಣಯದಂತೆ, ಸರ್ವೆ ನಂ.230 ರಲ್ಲಿನ 98-32 ಎಕರೆ ಜಮೀನನ್ನು ಭೂಸ್ವಾಧೀನಪಡಿಸಲು ದಿನಾಂಕ:02.03.2013 ರಂದು ಕೆಐಎಡಿ ಕಾಯ್ದೆ ಕಲಂ 3(1), 1(3) ರಡಿ ಅಧಿಸೂಚನೆ ಹೊರಡಿಸಲಾಗಿದೆ.

ಮಂಡಳಿಯು ಒಟ್ಟಾರೆ 440-05 ಎಕರೆ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ಒಟ್ಟಾರೆ ರೂ.5,50,15,625/- ಗಳನ್ನು ಕಂದಾಯ ಇಲಾಖೆಗೆ 2013ನೇ ಸಾಲಿನಲ್ಲಿ ಪಾವತಿಸಲಾಗಿರುತ್ತದೆ. ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆಐಎಡಿಬಿ ರವರು ಕೆಐಎಡಿ ಕಾಯ್ದೆ ಕಲಂ 28(8) ರಡಿ ಒಟ್ಟಾರೆ 440-05 ಎಕರೆ ಜಮೀನನ್ನು ದಿನಾಂಕ:10.07.2013 ರಂದು ಮಂಡಳಿಗೆ ವರ್ಗಾವಣೆ ಮಾಡಿರುತ್ತಾರೆ.

ತದನಂತರ, ಮೆ: Trans India Shipping Services Pvt Ltd., ರವರಿಗೆ ದಿನಾಂಕ:19.06.2010 ರ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯ ನಿರ್ಣಯದನ್ವಯ ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಜೆ.ಜಿ ಹಳ್ಳಿ ಹೋಬಳಿ, ಯಲ್ಲಕೆರೆ ಗ್ರಾಮದ ಸರ್ವೆ ನಂ.228/ಪಿ, 229/ಪಿ, 230/ಪಿ, 231/ಪಿ, 232/ಪಿ & 236/ಪಿ ರಲ್ಲಿ ಒಟ್ಟಾರೆ ವಿಸ್ತೀರ್ಣ: 440-05 ಎಕರೆ ಜಮೀನನ್ನು ದಿನಾಂಕ:13.09.2013 ರಂದು ಹಂಚಿಕೆ ಮಾಡಿ, ದಿನಾಂಕ:16.09.2013 ರಂದು ಸ್ವಾಧೀನ ಪತ್ರ ನೀಡಿ, ದಿನಾಂಕ:16.09.2013 ರಂದು 10 ವರ್ಷಗಳ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದೆ.

ಮೆ: Trans India Shipping Services Pvt Ltd., ರವರು ದಿನಾಂಕ:15.02.2018 ರಂದು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಸದರಿ ಜಮೀನಿನಲ್ಲಿ Private Industrial Park ಸ್ಥಾಪಿಸಲು ಅನುಮೋದನೆ ಪಡೆದಿರುತ್ತಾರೆ ಹಾಗೂ ಯೋಜನೆ ಅನುಷ್ಠಾನಗೊಳಿಸಲು ಎರಡು ವರ್ಷ ಕಾಲಾವಕಾಶ ಪಡೆದಿರುತ್ತಾರೆ.

| | | |
|---|---|---|
| | | ದಿನಾಂಕ:15.09.2023 ರಂದು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ, ಸದರಿ ಜಮೀನಿನಲ್ಲಿ ಯೋಜನೆ ಅನುಷ್ಠಾನಗೊಳಿಸಲು ಎರಡು ವರ್ಷ ಹೆಚ್ಚುವರಿ ಕಾಲಾವಕಾಶ ನೀಡಿ, ಯೋಜನೆ ಅನುಮೋದನೆಯನ್ನು ಮೆ: Trans India Shipping Services Pvt Ltd., ಇಂದ Trans India Industrial Park Pvt Ltd., ಗೆ ವರ್ಗಾವಣೆ ಮಾಡಲು ಅನುಮೋದನೆ ನೀಡಲಾಗಿದೆ.<br><br>ಮುಂದುವರೆದು, ದಿನಾಂಕ:12.11.2025 ರಂದು ನಡೆದ 156ನೇ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ಅನುಮೋದನೆಯಂತೆ ಸದರಿ ಜಮೀನಿನಲ್ಲಿ ಯೋಜನೆ ಅನುಷ್ಠಾನಗೊಳಿಸಲು ದಿನಾಂಕ:11.02.2026 ರಂದು ಎರಡು ವರ್ಷ ಕಾಲಾವಕಾಶ ನೀಡಲಾಗಿರುತ್ತದೆ. |

**ಸಂಖ್ಯೆ: ಸಿಐ 128 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.